ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ 18ನೇ ಅಡ್ಡ ರಸ್ತೆ, ಬೆಂಗಳೂರು-12,

ಕಡತ ಸಂಖ್ಯೆ:ಪಪೂಶಿ/ಶೈ.ಶಾ/ದಾ.ಕೈಪಿಡಿ/2015-16 ದಿನಾಂಕ/9-05-2016.

# ಸುತ್ತೋಲೆ

ವಿಷಯ: ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಥಮ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ದಾಖಲಾಗುವ ಸಮಯದಲ್ಲಿ ಪಾವತಿಸಬೇಕಾದ ಶುಲ್ಕಗಳ ವಿವರ

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ವಾಪ್ರಯು:36:3:ರಾಸೇಯೋ:03 ದಿನಾಂಕ 08-01-2004
2. ಸರ್ಕಾರದ ಆದೇಶ ಸಂಖ್ಯೆ: ಇಡಿ 3 ವಿವಿಧ 2007, ಬೆಂಗಳೂರು ದಿನಾಂಕ 04-04-2007
3. ಸರ್ಕಾರದ ಆದೇಶ ಸಂಖ್ಯೆ: ಇಡಿ 81 ಟಿಪಿಯು 2013, ಬೆಂಗಳೂರು ದಿನಾಂಕ 11-10-2013
4. ಸರ್ಕಾರದ ಆದೇಶ ಸಂಖ್ಯೆ: ಇಡಿ 198 ಯೋಸಕ 2013, ಬೆಂಗಳೂರು ದಿನಾಂಕ 15-04-2015.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2016-17ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳಲ್ಲಿ ದಾಖಲಾಗುವ ವಿದ್ಯಾರ್ಥಿಗಳು ಪಾವತಿಸಬೇಕಾದ ಶುಲ್ಕಗಳ ವಿವರ

I. ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳಲ್ಲಿ ಉಲ್ಲೇಖ-(1)ರ ಸರ್ಕಾರದ ಆದೇಶದಂತೆ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳಿಗೆ ದಾಖಲಾಗುವಾಗ **ರಾಷ್ಟ್ರೀಯ ಸೇವಾ ಯೋಜನೆ** ಚಟುವಟಿಕೆಗಳಿಗಾಗಿ ಪ್ರತಿ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಂದ ಶುಲ್ಕ ರೂ.5/-ನ್ನು ವಸೂಲು ಮಾಡಲು ಸೂಚಿಸಿದೆ, ಈ ಸಂಬಂಧವಾಗಿ ವಿವರನ್ನೊಳಗೊಂಡ ಜ್ಞಾಪನವನ್ನು ಅಂತರ್‌ಜಾಲದಲ್ಲಿ ಪ್ರಕಟಿಸಲಾಗಿದೆ.

II. ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳಲ್ಲಿ ಉಲ್ಲೇಖ-(2)ರ ಸರ್ಕಾರದ ಆದೇಶದಂತೆ ಪ್ರತಿ ಕಾಲೇಜಿನಲ್ಲಿ 30 ಯುವಕ ಮತ್ತು ಯುವತಿಯರ ಒಂದೊಂದು **ಭಾರತ ಸೇವಾದಳದ** ಶಾಖೆಯನ್ನು ತೆರೆಯವುದು, ಈ ಸಂಬಂಧವಾಗಿ ಪ್ರತಿ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಂದ ಸೇವಾದಳ ಶುಲ್ಕ ರೂ.10/-ಗಳನ್ನು ವಸೂಲಿ ಮಾಡಿ, ಅದರಲ್ಲಿ ಪ್ರತಿಯೊಂದು ಶಾಖೆಗೆ ವಾರ್ಷಿಕ ಶಾಖಾ ನೋಂದಾವಣಿ ಶುಲ್ಕ ರೂ.100=00ಗಳನ್ನು **ಪ್ರಧಾನ ಕಾರ್ಯದರ್ಶಿ, ಭಾರತ ಸೇವಾದಳ ಕೇಂದ್ರ ಕಛೇರಿ, ಕುಮಾರ ಕೃಪ ರಸ್ತೆ, ಬೆಂಗಳೂರು,** ಇವರಿಗೆ ಸಂದಾಯ ಮಾಡುವುದು. ಈ ಸಂಬಂಧವಾಗಿ ಸುತ್ತೋಲೆಯನ್ನು ಅಂತರ್‌ಜಾಲದಲ್ಲಿ ಪ್ರಕಟಿಸಲಾಗಿದೆ.

III. ಸರ್ಕಾರಿ/ಖಾಸಗಿ ಅನುದಾನಿತ/ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಥಮ/ದ್ವಿತೀಯ ಪಿಯುಸಿ ದಾಖಲಾತಿಗೆ ಸಂಬಂಧಿಸಿದಂತೆ ವಿವಿಧ ಶುಲ್ಕಗಳ ವಿವರಗಳನ್ನೊಳಗೊಂಡ ಉಲ್ಲೇಖ-(3)ರ ಸರ್ಕಾರಿ ಆದೇಶವನ್ನು ಈ ಸುತ್ತೋಲೆಯೊಂದಿಗೆ ಪ್ರಕಟಿಸಲಾಗಿದೆ.

....2

IV. ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ದಾಖಲಾಗುವ ವಿದ್ಯಾರ್ಥಿಗಳಿಂದ ಉಲ್ಲೇಖ-(4)ರ ಸರ್ಕಾರದ ಆದೇಶದಂತೆ **ಸೌಟ್ಸ್ & ಗೈಡ್ಸ್** ಘಟಕವನ್ನು ಸ್ಥಾಪಿಸುವ ಪ್ರಯುಕ್ತ ರೂ.50/-ಗಳನ್ನು ವಸೂಲು ಮಾಡಿ ಪ್ರತಿ ಘಟಕಕ್ಕೆ ರೂ.156/-ರಂತೆ ಆಯಾ ಜಿಲ್ಲಾ ಸಂಸ್ಥೆ **ಭಾರತ್ ಸೌಟ್ಸ್ & ಗೈಡ್ಸ್** (ರೋವರ್ & ರೇಂಜರ್) ಕಛೇರಿಯಲ್ಲಿ ಪಾವತಿಸಿ ನೋಂದಣಿ ಮಾಡಿಸುವುದು, ಸದರಿ ಆದೇಶ ಹಾಗೂ ಮಾರ್ಗಸೂಚಿಯನ್ನು ಈ ಸುತ್ತೋಲೆಯೊಂದಿಗೆ ಪ್ರಕಟಿಸಲಾಗಿದೆ.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:-

1. ರಾಜ್ಯದ ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ-ಮುಂದಿನ ಕ್ರಮಕ್ಕಾಗಿ.
2. ಎಲ್ಲಾ ಪದವಿ ಪೂರ್ವ ಕಾಲೇಜು ಪ್ರಾಚಾರ್ಯರ ಗಮನಕ್ಕೆ ತರಲು ಜಿಲ್ಲಾ ಉಪ ನಿರ್ದೇಶಕರ ಮೂಲಕ ಮುಂದಿನ ಕ್ರಮಕ್ಕಾಗಿ.
3. ಜಂಟಿ ನಿರ್ದೇಶಕರು, (ಆಡಳಿತ/ಶೈಕ್ಷಣಿಕ/ಪರೀಕ್ಷೆ/ಮಾನ್ಯತೆ/ಮೂಲಭೂತ) ಪದವಿ ಪೂರ್ವ ಶಿಕ್ಷಣ ಇಲಾಖೆ ಇವರ ಮಾಹಿತಿಗಾಗಿ.
4. ಉಪ ನಿರ್ದೇಶಕರು, (ಆಡಳಿತ/ಶೈಕ್ಷಣಿಕ/ಪರೀಕ್ಷೆ/ಮಾನ್ಯತೆ/ಮೂಲಭೂತ) ಪದವಿ ಪೂರ್ವ ಶಿಕ್ಷಣ ಇಲಾಖೆ ಇವರಿಗೆ ಮಾಹಿತಿಗಾಗಿ.
5. ನಿರ್ದೇಶಕರ ಆಪ್ತ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರಿಗೆ ಮಾಹಿತಿಗಾಗಿ.
6. ಲೆಕ್ಕಪತ್ರ ಶಾಖೆ, ಲೆಕ್ಕಾಧಿಕಾರಿಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರಿಗೆ ಮಾಹಿತಿಗಾಗಿ.
7. ಸಹಾಯಕ ನಿರ್ದೇಶಕರು, 'ಇ' ಆಡಳಿತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ಅಂತರ್‌ಜಾಲದಲ್ಲಿ ಅಳವಡಿಸಲು-ಮುಂದಿನ ಕ್ರಮಕ್ಕಾಗಿ.
8. ಕಛೇರಿ ಪ್ರತಿ.

ಸರ್ಕಾರದ ಆದೇಶ ಸಂಖ್ಯೆ:ಇಡಿ 81 ಟಿಪಿಯು 2013 ದಿನಾಂಕ:11-10-2013ಕ್ಕೆ ಅನುಬಂಧ

| ಕ್ರಮ ಸಂಖ್ಯೆ | | ವಿವರ | ಪ್ರಸ್ತುತಜಾರಿಯಲ್ಲಿರುವ ಶುಲ್ಕಗಳ ದರ ರೂಗಳಲ್ಲಿ (2010) | ಪರಿಷ್ಕರಣೆಗೆ ಪ್ರಸ್ತಾಪಿಸಲ್ಪಟ್ಟದರ ರೂಗಳಲ್ಲಿ(2013-14) |
|---|---|---|---|---|
| 1 | | 2 | 3 | 4 |
| 1. | | ಹೊಸ ಕಾಲೇಜುಗಳನ್ನು ಪ್ರಾರಂಭಿಸಲು ಶುಲ್ಕ (ಖಾಸಗಿ ಕಾಲೇಜುಗಳಿಗೆ ಮಾತ್ರ) | 30,000 | 36,000 |
| 2 | | ಸಾಲ್ವೆನ್ಸಿ (ಆಡಳಿತ ಮಂಡಳಿಯವರು ಹೊಂದಿರ ಬೇಕಾದ ಚರ-ಸ್ಥಿರ ಸ್ವತ್ತು) | 24,00,000 | 2,880,000 |
| 3 | | ಸ್ಟೆಬಿಲಿಟಿ ಫಂಡ್ (ಆಡಳಿತ ಮಂಡಳಿಯವರು ತಮ್ಮ ಹಾಗೂ ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ ಇವರಜಂಟಿಖಾತೆಯಲ್ಲಿಇಡಬೇಕಾದ ಹಣ) | 120,000 | 144,000 |
| 4 | | ನೋಂದಣಿ ಶುಲ್ಕ (ಆಡಳಿತ ಮಂಡಳಿಯವರು ಹೊಸ ಕಾಲೇಜುಗಳನ್ನು ಪ್ರಾರಂಭಿಸಲು) | 60000 | 72,000 |
| 5 | | ಹೊಸದಾಗಿ ಸಂಯೋಜನೆ ಅಥವಾ ವಿಷಯ ಪ್ರಾರಂಭಿಸಲು ಶುಲ್ಕ | | |
| | 1 | ವಿಜ್ಞಾನ ಸಂಯೋಜನೆ | 24000 | 28800 |
| | 2 | ಕಲಾ ಸಂಯೋಜನೆ | 12000 | 14400 |
| | 3 | ವಾಣಿಜ್ಯ ಸಂಯೋಜನೆ | 12000 | 14400 |
| | 4 | ಒಂದು ವಿಷಯಕ್ಕೆ (ಭಾಷಾ ವಿಷಯ/ ಕಲೆ ಅಥವಾ ವಾಣಿಜ್ಯ ವಿಷಯ) | 6000 | 7200 |
| | 5 | ಒಂದು ವಿಷಯಕ್ಕೆ (ವಿಜ್ಞಾನ ವಿಷಯ) | 12000 | 14400 |
| 6 | | ವಾರ್ಷಿಕ ಮಾನ್ಯತೆ ನವೀಕರಿಸಲು ಶುಲ್ಕ (ಆಡಳಿತಮಂಡಳಿಯವರಿಂದ) | 7500 | 9000 |
| 7 | | ಹೊಸದಾಗಿ ಪ್ರಾರಂಭವಾಗುವ ಹೆಚ್ಚುವರಿ ವಿಭಾಗವಿಜ್ಞಾನ | | 14400 |
| | | ಕಲಾ | | 7200 |
| | | ವಾಣಿಜ್ಯ | | 7200 |

| | | | | |
|---|---|---|---|---|
| ಬಿ.ದಾಖಲಾತಿ ಸಮಯದಲ್ಲಿ ಪ್ರತಿ ವಿದ್ಯಾರ್ಥಿಗಳಿಂದ ವಸೂಲು ಮಾಡಬೇಕಾದ ಶುಲ್ಕ (ವಾರ್ಷಿಕ ಶುಲ್ಕ) | | | | |
| 1 | ದಾಖಲಾತಿಅರ್ಜಿ ಶುಲ್ಕ | | 21 | 25 |
| 2 | ನೋಂದಣಿ ಶುಲ್ಕ | | 21 | 25 |
| 3 | ಬೋಧನಾ ಶುಲ್ಕ | | | |
| | 1 | ಸರ್ಕಾರಿ ಕಾಲೇಜುಗಳಲ್ಲಿ | 420 | 504 |
| | 2 | ಖಾಸಗಿ ಕಾಲೇಜುಗಳಲ್ಲಿ | 840 | 1,008 |
| 4 | ಪ್ರಯೋಗಶಾಲಾ ಶುಲ್ಕ | | 280 | 336 |
| 5 | ದಾಖಲಾತಿ ಶುಲ್ಕ | | 30 | 36 |

| | | | |
|---|---|---|---|
| 6 | 1. ವಿಳಂಬ ದಾಖಲಾತಿದಂಡ ಶುಲ್ಕ | 420 | 504 |
| | 2. ವಿಶೇಷ ವಿಳಂಬ ದಾಖಲಾತಿದಂಡ ಶುಲ್ಕ (ಸೂಚನೆ: ನಿಗದಿತ ದಿನಾಂಕ ಮುಗಿದ 15 ದಿನಗಳವರೆಗೆ ನಿರ್ದೇಶಕರಅನುಮತಿ ಪಡೆದು ವಿಳಂಬ ಶುಲ್ಕ ನೀಡಿದಾಖಲಾಗಬಹುದಾಗಿದೆ) (ನಿರ್ದೇಶಕರುಆಯಾ ಪ್ರಕರಣದಲ್ಲಿ ವಿವೇಚನೆಯ ಮೇರೆಗೆಅನುಮತಿ ನೀಡಬಹುದು). | 1400 | 1,680 |
| 7 | ಸ್ಪೋರ್ಟ್ಸ್ ಶುಲ್ಕ | 70 | 84 |
| 8 | ಪಠ್ಯೇತರಅಥವ ಸಾಹಿತ್ಯ ಸಾಂಸ್ಕೃತಿಕಚಟುವಟಿಕೆ ಶುಲ್ಕ | 56 | 67 |
| 9 | ಗ್ರಂಥಾಲಯ/ವಾಚನಾಲಯ ಶುಲ್ಕ | 100 | 120 |
| 10 | ವಿದ್ಯಾರ್ಥಿಗಳ ಕಲ್ಯಾಣ ನಿಧಿ | 21 | 25 |
| 11 | ಶಿಕ್ಷಕರ ಕಲ್ಯಾಣ ನಿಧಿ | 21 | 25 |
| 12 | ವಿಶೇಷಕ್ರೀಡಾ ನಿಧಿ | 28 | 34 |
| 13 | ಶೌಚಾಲಯ ನಿರ್ವಹಣಾ ಶುಲ್ಕ | 20 | 24 |
| 14 | ವಿದ್ಯುಚ್ಛಕ್ತಿ ಮತ್ತು ನೀರಿನ ಶುಲ್ಕ | 20 | 24 |

### ಸಿ. ಪ್ರಾಯೋಗಿಕ ಪರೀಕ್ಷೆ ಶುಲ್ಕ

| | | | |
|---|---|---|---|
| 1 | ಪ್ರಥಮ ಪಿಯುಸಿ ಪ್ರಾಯೋಗಿಕ ಪರೀಕ್ಷೆ ಶುಲ್ಕ ಪ್ರತಿ ವಿಷಯಕ್ಕೆ | 42 | 50 |
| 2 | ದ್ವಿತೀಯ ಪಿಯುಸಿ ಪ್ರಾಯೋಗಿಕ ಪರೀಕ್ಷೆ ಶುಲ್ಕ ಪ್ರತಿ ವಿಷಯಕ್ಕೆ | 70 | 84 |

### ಡಿ. ಪಿಯುಸಿ ಪರೀಕ್ಷಾ ಶುಲ್ಕ

| | | | | |
|---|---|---|---|---|
| 1 | ಪ್ರಥಮ ಪಿಯುಸಿ ಪರೀಕ್ಷಾ ಶುಲ್ಕ (ತರಗತಿ ಪರೀಕ್ಷೆ) | | 140 | 168 |
| 2 | ದ್ವಿತೀಯ ಪಿಯುಸಿ ಪರೀಕ್ಷಾ ಶುಲ್ಕ | | | |
| | 1 | ಒಂದು ವಿಷಯಕ್ಕೆ | 84 | 101 |
| | 2 | ಎರಡು ವಿಷಯಕ್ಕೆ | 168 | 201 |
| | 3 | ಮೂರುವಿಷಯಕ್ಕೆ ಹಾಗೂ ಮೇಲ್ಪಟ್ಟ ಮತ್ತು ಹೊಸ (ಫ್ರೆಶರ್) ವಿದ್ಯಾರ್ಥಿಗಳಿಗೆ | 252 | 302 |
| | 4 | ಪರೀಕ್ಷಾ ಶುಲ್ಕ ವಿನಾಯ್ತಿ ಪಡೆದ ಪ.ಜಾ/ ಪ.ಪಂ/ಪ್ರವರ್ಗ-1/ — ಹಾಗು ಇತರೆಸಾಮನ್ಯವಿದ್ಯಾರ್ಥಿಗಳು ಕಡ್ಡಾಯವಾಗಿ ಪಾವತಿಸಬೇಕಾದಶುಲ್ಕ (ಅಂಕಪಟ್ಟಿ ಶುಲ್ಕ) | 30 | 36 |
| 3 | ದಂಡ ಶುಲ್ಕ (ನಿಗಧಿತಅವಧಿಯ ನಂತರ ಪರೀಕ್ಷಾ ಶುಲ್ಕ ಕಟ್ಟಿಅರ್ಜಿ ಸಲ್ಲಿಸಲು) (ಪೂರಕ ಪರೀಕ್ಷೆಗಳಿಗೆ ಅನ್ವಯವಾಗುದಿಲ್ಲ) | | ದಿನಕ್ಕೆ ರೂ 36-00 ರಂತೆಗರಿಷ್ಠ ರೂ 360-00 ( ಹತ್ತು ದಿನಗಳವರೆಗೆ) | |
| 4 | ವಿಶೇಷ ದಂಡ ಶುಲ್ಕ (ದಂಡ ಶುಲ್ಕ ಕಟ್ಟಲು ನಿಗದಿಪಡಿಸಿದ ಅವಧಿಯ ನಂತರ ಪರೀಕ್ಷಾ ಶುಲ್ಕ ಕಟ್ಟಿಅರ್ಜಿ ಸಲ್ಲಿಸಲು) (ಪೂರಕ ಪರೀಕ್ಷೆಗಳಿಗೆ ಅನ್ವಯವಾಗುದಿಲ್ಲ) | | ದಿನಕ್ಕೆ ರೂ 50-00 ರಂತೆಗರಿಷ್ಠ ರೂ 1000-00 ( ಇಪ್ಪತ್ತು ದಿನಗಳವರೆಗೆ) | |

| | | | |
|---|---|---|---|
| 5 | ಹೆಚ್ಚುವರಿ ದಂಡ ಶುಲ್ಕ: ವಿಶೇಷ ದಂಡ ಶುಲ್ಕದಅವಧಿ ಮುಗಿದ ನಂತರ ನಿರ್ದೇಶಕರು ಪರೀಕ್ಷಾ ಶುಲ್ಕ ಕಟ್ಟಲು ಅನುಮತಿ ನೀಡಿದಲ್ಲಿ ಮಾತ್ರ (ಪೂರಕ ಪರೀಕ್ಷೆಗಳಿಗೆ ಅನ್ವಯವಾಗುವುದಿಲ್ಲ) | ಪ್ರತಿ ದಿನಕ್ಕೆ 60 | ಪ್ರತಿ ದಿನಕ್ಕೆ 72 |
| 6 | ದ್ವಿತೀಯ ಪಿಯುಸಿ ತರಗತಿ ಪರೀಕ್ಷಾ ಶುಲ್ಕ (ಕಾಲೇಜಿನವರು ನಡೆಸುವತರಗತಿ ಪರೀಕ್ಷೆ) | 140 | 168 |
| 7 | ಎರಡನೇ ಪಿಯುಸಿ ದ್ವಿಪ್ರತಿ ಪ್ರವೇಶ ಪತ್ರದ ಶುಲ್ಕ | 100 | 120 |

ಇ. ಫಲಿತಾಂಶ ತಿರಸ್ಕರಣೆ ಶುಲ್ಕ

| | | | |
|---|---|---|---|
| 1 | ಮೊದಲ ಬಾರಿಗೆ ಪ್ರತಿ ವಿಷಯಕ್ಕೆ | 105 | 126 |
| 2 | ದ್ವಿತೀಯ ಹಾಗೂ ಅಂತಿಮ ಬಾರಿಗೆ ಪ್ರತಿ ವಿಷಯಕ್ಕೆ | 210 | 252 |

ಎಫ್. ಪಿಯುಸಿ ಪರೀಕ್ಷಾ ಕೇಂದ್ರ ಮತ್ತುಕಾಲೇಜು ಬದಲಾವಣೆ ಶುಲ್ಕ

| | | | |
|---|---|---|---|
| 1 | ಎರಡನೇ ಪಿಯುಸಿ ಪರೀಕ್ಷಾಕೇಂದ್ರ ಬದಲಾವಣೆ ಶುಲ್ಕ | 1000 | 1,200 |
| 2 | ಪ್ರಥಮಅಥವ ದ್ವಿತೀಯ ಪಿಯುಸಿ ಕಾಲೇಜು ಬದಲಾವಣೆ ಶುಲ್ಕ (ಅಕ್ಟೋಬರ್ ತಿಂಗಳವರೆಗೆ ಮಾತ್ರ) | 1000 | 1,200 |

ಜಿ. ದ್ವಿಪ್ರತಿಅಂಕಪಟ್ಟಿಅರ್ಜಿ, ಹಾಗೂ ಪ್ರಮಾಣ ಪತ್ರ ಶುಲ್ಕ:

| | | | | |
|---|---|---|---|---|
| 1 | ಅನುತ್ತೀರ್ಣ ಅಭ್ಯರ್ಥಿಗಳ ಅಂಕಪಟ್ಟಿಅರ್ಜಿ ಶುಲ್ಕ | | | |
| | 1 | ಫಲಿತಾಂಶ ಪ್ರಕಟವಾದ 2 ವರ್ಷಗಳಲ್ಲಿ ಅರ್ಜಿಸಲ್ಲಿಸಿದಲ್ಲಿ | 100 | 120 |
| | 2 | ಫಲಿತಾಂಶ ಪ್ರಕಟವಾದ 2 ವರ್ಷಗಳ ನಂತರ ಹಾಗೂ 10 ವರ್ಷಗಳಲ್ಲಿ ಅರ್ಜಿ ಸಲ್ಲಿಸಿದಲ್ಲಿ | 200 | 240 |
| | 3 | ಫಲಿತಾಂಶ ಪ್ರಕಟವಾದ 10 ವರ್ಷಗಳ ನಂತರಅರ್ಜಿ ಸಲ್ಲಿಸಿದಲ್ಲಿ | 300 | 360 |
| 2 | ಉತ್ತೀರ್ಣರಾದ ಅಭ್ಯರ್ಥಿಗಳ ಪ್ರಮಾಣ ಪತ್ರಗಳ ದ್ವಿಪ್ರತಿಗಳಿಗೆ | | 1000 | 1,200 |
| 3 | ಉತ್ತೀರ್ಣರಾದ ಅಭ್ಯರ್ಥಿಗಳ ಪ್ರಮಾಣ ಪತ್ರಗಳ ತ್ರಿಪ್ರತಿಗಳಿಗೆ | | 2000 | 2,400 |
| 3ಎ | ತತ್ಕಾಲ್ (ಅರ್ಜಿ ನೀಡಿದ ದಿನವೇ ಅಂಕಪಟ್ಟಿ ನೀಡಲು) | | 5000 | 6000 |

ಹೆಚ್. ಖಾಸಗಿ ಅಭ್ಯರ್ಥಿಗಳಿಗಾಗಿ ನೇರವಾಗಿ ದ್ವಿತೀಯ ಪಿಯುಸಿ ಪರೀಕ್ಷೆಗೆ ಹಾಜರಾಗಲು ಶುಲ್ಕ

| | | | |
|---|---|---|---|
| 1 | ನೋಂದಣಿ ಶುಲ್ಕ (Registration Fee) (ನೋಂದಣಿ ಶುಲ್ಕಗಳನು ಕಾಲೇಜಿನಲ್ಲಿಯೇ ಉಳಿಸಿಕೊಂಡು ಅಂಚೆ ವೆಚ್ಚ ಹಾಗೂ ಪರಿಶೀಲನಾ ಶುಲ್ಕವಾಗಿ ಪ್ರಾಂಶುಪಾಲರು ಮತ್ತು ಸಿಬ್ಬಂದಿ ಉಪಯೋಗಿಸಬಹುದು) | 50 | 60 |
| 2 | ದಾಖಲಾತಿಅರ್ಜಿ ಶುಲ್ಕ (Admission Fee Common to all) | 210 | 252 |
| 2ಎ | ಕಾಲೇಜುಅಭಿವೃದ್ಧಿ ಶುಲ್ಕ (ವಸೂಲಾದ ಈ ಶುಲ್ಕವನ್ನುಕಾಲೇಜು ಸಂಚಿತ ನಿಧಿಗೆಜಮ ಮಾಡಿ ಮೂಲಭೂತ ಸೌಕರ್ಯಗಳಿಗೆ ಪ್ರಸ್ತಾವನೆ ಕಳುಹಿಸಿ ನಿರ್ದೇಶಕರಅನುಮತಿ ಪಡೆಯಬೇಕು) | 850 | 1,020 |
| 3 | ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ (ಪರೀಕ್ಷಾ ಶುಲ್ಕ ) ಅಂಕ ಪಟ್ಟಿ | 50 | 60 |

ಏ ಇತರ-ಶುಲ್ಕಗಳು

| | | | | |
|---|---|---|---|---|
| 1 | ಅಂಕಗಳ ಮರುಎಣಿಕೆ ಶುಲ್ಕ ಪ್ರತಿ ವಿಷಯಕ್ಕೆ(RetotallingFee) | | 280 | 336 |
| 2 | ಉತ್ತರ ಪತ್ರಿಕೆಗಳ ಫೋಟೋ ಪ್ರತಿ ಪಡೆಯಲು ಶುಲ್ಕ ಒಂದು ವಿಷಯಕ್ಕೆ(Photo Copies) | | 420 | 504 |
| 3 | ಮರು ಮೌಲ್ಯಮಾಪನ ಶುಲ್ಕ (Revaluation) | | 1050 | 1,260 |
| 4 | ಯೋಗ್ಯತ ಪತ್ರ/ ಅರ್ಹತ ಪತ್ರ ನೀಡುವ ಶುಲ್ಕ (Equivalence Certificate) | | | |
| | 1. | ಭಾರತದಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಗೆ | 500 | 600 |
| | 2. | ಹೊರದೇಶದಲ್ಲಿ ವ್ಯಾಸಂಗ ಮಾಡಿದ ಹಾಗೂ ಹೊರದೇಶದ ಪಠ್ಯಕ್ರಮದಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಗೆ | 3000 | 3,600 |
| 5 | ವಲಸೆ ಪ್ರಮಾಣ ಪತ್ರದ ಶುಲ್ಕ (Migration Certificate) | | 300 | 360 |
| 6 | ವಿಷಯ/ಸಂಯೋಜನೆ ಬದಲಾಯಿಸಿಕೊಳ್ಳಲು ಶುಲ್ಕ | | 500 | 600 |
| 7 | ಖಾಸಗಿ ಅಭ್ಯಾಸಕ್ಕೆಅನುಮತಿ ಪಡೆಯಲು ಶುಲ್ಕ | | | |
| | 1 | ಭಾರತದ ಭಾಷಾ ವಿಷಯಗಳಿಗೆ | 420 | 504 |
| | 2. | ಅನ್ಯ ದೇಶಿಯ ಭಾಷೆಗಳಿಗೆ | 3000 | 3600 |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

11/10/13

(ಎಸ್.ಹೆಚ್.ಕುರಿಯವರ್),
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ(ಪದವಿ ಪೂರ್ವ ಶಿಕ್ಷಣ).

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ – ರಾಜ್ಯದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ರೋವರ್ ಮತ್ತು ರೇಂಜರ್ ಘಟಕಗಳನ್ನು ಪ್ರಾರಂಭಿಸುವ ಬಗ್ಗೆ,

ಓದಲಾಗಿದೆ:-1) ನಿರ್ದೇಶಕರು. ಪದವಿ ಪೂರ್ವ ಶಿಕ್ಷಣ ಇಲಾಖೆ. ರವರ ಪತ್ರ ಸಂಖ್ಯೆ:-ಪಪೂಶಿಇ/ಶೈಶಾ-05/ರೋ.ರೇ.ಘ.ಪ್ರಾ/ಬಗ್ಗೆ.2013-14 ದಿನಾಂಕ:08-01-2014 ಮತ್ತು 12.11-2013.

2) ರಾಜ್ಯ ಕಾರ್ಯದರ್ಶಿ. ದಿ:ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್. ಕರ್ನಾಟಕ ಇವರ ಪತ್ರ ಸಂಖ್ಯೆ:ಬಿಎಸ್‌ಜಿ/ಜಿಡಬ್ಲ್ಯೂ/421/2012-13.ದಿ:23-11-2013

JD(Acq)

ಪ್ರಸ್ತಾವನೆ:- JDiv-1006

ಮೇಲೆ ಓದಲಾದ (1) ರ ದಿನಾಂಕ: 08-01-2014 ಮತ್ತು 12.11-2013 ಪತ್ರಗಳಲ್ಲಿ ನಿರ್ದೇಶಕರು. ಪದವಿ ಪೂರ್ವ ಶಿಕ್ಷಣ ಇಲಾಖೆ. ಇವರು ರಾಜ್ಯದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಈಗಾಗಲೇ ಎನ್‌ಎಸ್‌ಎಸ್ ಮತ್ತು ಎನ್‌ಸಿಸಿ ಚಟುವಟಿಕೆಗಳನ್ನು ನಡೆಸುತ್ತಿರುವುದರಿಂದ ವಿದ್ಯಾರ್ಥಿಗಳ ದೈಹಿಕ ಹಾಗೂ ಮಾನಸಿಕ ಸದೃಡತೆಗೆ ಕ್ರೀಢಾ ಕೂಟ ಸ್ಪರ್ದೆಗಳನ್ನು ತಾಲ್ಲೂಕು, ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ನಡೆಸಲಾಗುತ್ತಿದ್ದು. ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ತಾಲ್ಲೂಕು, ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ನಡೆಸಲಾಗುತ್ತಿರುವುದರಿಂದ ದಿ:ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಕರ್ನಾಟಕ ಇವರು ರೋವರ್ ಮತ್ತು ರೇಂಜರ್ ಘಟಕಗಳನ್ನು ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಾರಂಭಿಸಲು ಹಾಗೂ ಸದರಿ ಘಟಕಗಳ ಚಟುವಟಿಕೆಗಳಿಗಾಗಿ ಪ್ರತಿ ವಿದ್ಯಾರ್ಥಿಗಳಿಂದ ಪ್ರತಿ ವರ್ಷ ಪದವಿ ಪೂರ್ವ ಶುಲ್ಕದೊಂದಿಗೆ ರೂ.50/-ಗಳನ್ನು ಸಂಗ್ರಹಿಸಿ ರೋವರ್/ರೇಂಜರ್ ನಿಧಿ ಎಂದು ಸಂಘಟಿಸಿ ಸದರಿ ಮೊತ್ತವನ್ನು ರೋವರ್ ಮತ್ತು ರೇಂಜರ್ ಚಟುವಟಿಕೆಯ ಕಾರ್ಯಕ್ರಮಗಳಿಗೆ ಉಪಯೋಗಿಸಲು ಹಾಗೂ ಸಂಗ್ರಹಿಸಿದ ನಿಧಿಯಲ್ಲಿ ರೂ.156/-ಗಳನ್ನು ರೋವರ್ ಮತ್ತು ರೇಂಜರ್ ನೊಂದಣಿ ಮತ್ತು ನವೀಕರಣಕ್ಕಾಗಿ ದಿ:ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಕರ್ನಾಟಕ ಕಛೇರಿಗೆ ಸಲ್ಲಿಸಲು ಸರ್ಕಾರದ ಅನುಮತಿ ನೀಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡತೆ ಆದೇಶ ಹೊರಡಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಇಡಿ 198 ಯೋಸಕ 2013 ಬೆಂಗಳೂರು, ದಿನಾಂಕ: 15-4-2015**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಎನ್‌ಎಸ್‌ಎಸ್ ಮತ್ತು ಎನ್‌ಸಿಸಿ ಘಟಕಗಳ ಜೊತೆಗೆ ದಿ:ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್‌ನ ರೋವರ್ ಮತ್ತು ರೇಂಜರ್ ಘಟಕಗಳನ್ನು ಪ್ರಾರಂಭಿಸಲು ಹಾಗೂ ಸದರಿ ಘಟಕಗಳ ಚಟುವಟಿಕೆಗಾಗಿ ಪ್ರತಿ

ವಿದ್ಯಾರ್ಥಿಗಳಿಂದ ಪ್ರತಿ ವರ್ಷ ಪದವಿ ಪೂರ್ವ ಶುಲ್ಕದೊಂದಿಗೆ ರೂ.50/-(ರೂಪಾಯಿ ಐವತ್ತು ಮಾತ್ರ)ಗಳನ್ನು ವಸೂಲು ಮಾಡಲು' ಹಾಗೂ ಪ್ರತಿ ಘಟಕವು ರೂ.156/-(ಒಂದು ನೂರ ಐವತ್ತಾರು ಮಾತ್ರ)ಗಳನ್ನು ದಿ:ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್‌ನ ಕಛೇರಿಯಲ್ಲಿ ಪ್ರತಿ ವರ್ಷ ನೊಂದಣಿ/ನವೀಕರಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಐ.ಎಫ್.ಮಾಗಿ)
ವಿಶೇಷಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ.
ಶಿಕ್ಷಣ ಇಲಾಖೆ(ಯೋಜನೆ)
15/7

ಇವರಿಗೆ:-

1. ಮಹಾಲೇಖಪಾಲರು(ಲೆಕ್ಕಪತ್ರ ಮತ್ತು ಲೆಕ್ಕಪರಿಶೋದನೆ). ಕರ್ನಾಟಕ.ಬೆಂಗಳೂರು.
2. ನಿರ್ದೇಶಕರು. ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
3. ಎಲ್ಲಾ ಸರ್ಕಾರಿ ಪದವಿ ಪೂರ್ವ ಶಿಕ್ಷಣ ಇಲಾಖೆ. ಪ್ರಾಂಶುಪಾಲರುಗಳಿಗೆ.(ನಿರ್ದೇಶಕರು. ಪದವಿ ಪೂರ್ವ ಶಿಕ್ಷಣ ಇಲಾಖೆ. ಇವರ ಮುಖಾಂತರ)
4. ರಾಜ್ಯ ಕಾರ್ಯದರ್ಶಿ. ದಿ:ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಕರ್ನಾಟಕ. ಶಾಂತಿ ಗೃಹ. ನಂ 39. ಪ್ಯಾಲೆಸ್ ರೋಡ್. ಮಹರಾಣಿ ವಿಜ್ಞಾನ ಕಾಲೇಜು. ಬೆಂಗಳೂರು-560001.

ಪ್ರತಿಯನ್ನು:-

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು. ವಿಧಾನಸೌಧ. ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ. ಬಹುಮಹಡಿ ಕಟ್ಟಡ. ಬೆಂಗಳೂರು

ನಂ. ಬಾ ಕೆ ರ ಕ್ರ.ಸಂ ೧೦೨೭/೦೭-೦೮/ದಿ. ೧೯-೬-೦೭

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ:-ಪದವಿ ಶಿಕ್ಷಣ ಕಾಲೇಜುಗಳಲ್ಲಿ ಭಾರತ ಸೇವಾದಳದ ಶಾಖೆಗಳನ್ನು ನೊಂದಾಯಿಸುವ ಬಗ್ಗೆ.

ಓದಲಾಗಿದೆ:- 1) ಸರ್ಕಾರಿ ಆದೇಶ ಸಂಖ್ಯೆ:ಇಡಿ 13 ವಿವಿಧ 2004, ದಿನಾಂಕ: 05-12-2006.

2) ಪತ್ರ ಸಂಖ್ಯೆ:ಭಾಸೇದ/ ಕೇಕ/637, 2006-07, ದಿನಾಂಕ: 04-01-2007.

<u>ಪ್ರಸ್ತಾವನೆ:</u>

ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಈ ಕೆಳಕಂಡಂತೆ ಆದೇಶಿಸಲಾಗಿತ್ತು.

"ಪದವಿ ಪೂರ್ವ ಶಿಕ್ಷಣ ಕಾಲೇಜುಗಳಲ್ಲಿ 30 ಯುವಕ ಹಾಗೂ ಯುವತಿಯರ ಒಂದೊಂದು "ಭಾರತ ಸೇವಾದಳ" ದ ಶಾಖೆಯನ್ನು ತೆರೆಯಲು ಹಾಗೂ ಸಮ್ಮತಿ ನೀಡಿದ ಕಾಲೇಜುಗಳಿಂದ ಒಂದು ಶಾಖೆಗೆ ರೂ. 100-00 (ರೂಪಾಯಿ ನೂರು ಮಾತ್ರ)ಶುಲ್ಕವನ್ನು ಪಡೆಯಲು ಹಾಗೂ ಅಂತಹ ಪದವಿ ಪೂರ್ವ ಶಿಕ್ಷಣ ಕಾಲೇಜುಗಳಲ್ಲಿ ಪ್ರತಿ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಂದ ವರ್ಷಕ್ಕೆ ರೂ. 10-00 (ರೂಪಾಯಿ ಹತ್ತು ಮಾತ್ರ)ನ್ನು ಭಾರತ ಸೇವಾದಳದ ಕಾರ್ಯಕ್ರಮಗಳಿಗೆ ಪಡೆಯಲು ಹಾಗೂ ಸಂಪೂರ್ಣ ಮೊಬಲಗನ್ನು ಆಯಾಯ ಕಾಲೇಜಿನ ಪ್ರಾಂಶುಪಾಲರಿಂದ ಭಾರತ ಸೇವಾದಳದ ಕೇಂದ್ರ ಕಛೇರಿಗೆ ಸಂದಾಯ ಮಾಡುವಂತೆ ಆದೇಶಿಸಲಾಗಿದೆ.

ಈ ಸಂಬಂಧದಲ್ಲಿ ವಸೂಲಾದ ವಂತಿಗೆಯನ್ನು ಭಾರತ ಸೇವಾದಳ ಚಟುವಟಿಕೆಗಳಿಗಾಗಿಯೇ ವಿನಿಯೋಗಿಸತಕ್ಕದ್ದು. ಇತರ ಯಾವುದೇ ಚಟುವಟಿಕೆಗಳಿಗೆ ಉಪಯೋಗಿಸಬಾರದು."

ಈ ಕುರಿತಂತೆ ಪ್ರಧಾನ ಕಾರ್ಯದರ್ಶಿ ಭಾರತ ಸೇವಾದಳ, ಬೆಂಗಳೂರು ಇವರು ಮೇಲೆ (2)ರಲ್ಲಿ ಓದಲಾದ ಪತ್ರ ಬರೆಯುತ್ತಾ ಸೂಕ್ತ ತಿದ್ದುಪಡಿ ಹೊರಡಿಸುವಂತೆ ಕೋರುತ್ತಾರೆ.

**<u>ಸರ್ಕಾರಿ ಆದೇಶ ಸಂಖ್ಯೆ: ಇಡಿ 3 ವಿವಿಧ 2007,</u>**
**<u>ಬೆಂಗಳೂರು ದಿನಾಂಕ: 04-04-2007.</u>**

ಆ ಹಿನ್ನಲೆಯಲ್ಲಿ ದಿನಾಂಕ:05-12-2006ರ ಆದೇಶದ ಉಲ್ಲೇಖಿತ ಭಾಗವನ್ನು ಈ ಕೆಳಗಿನಂತೆ ಬದಲಾಯಿಸಿ ಓದಿಕೊಳ್ಳುವುದು.

"ಪದವಿ ಪೂರ್ವ ಶಿಕ್ಷಣ ಕಾಲೇಜುಗಳಲ್ಲಿ 30 ಯುವಕ-ಯುವತಿಯರ ಒಂದೊಂದು ಭಾರತ ಸೇವಾದಲದ ಶಾಖೆಯನ್ನು ತೆರೆಯಲು ಒಂದು ಶಾಖೆಗೆ ವಾರ್ಷಿಕ ಶಾಖಾ ನೋಂದಾವಣೆ ಶುಲ್ಕ ರೂ.100-00 ಗಳನ್ನು ಪ್ರಧಾನ ಕಾರ್ಯದರ್ಶಿ ಭಾರತ ಸೇವಾದಲ ಕೇಂದ್ರ ಕಛೇರಿ, ಕುಮಾರಕೃಪ ರಸ್ತೆ, ಬೆಂಗಳೂರು ಇವರಿಗೆ ಸಂದಾಯ ಮಾಡುವಂತೆ ಹಾಗೂ

ಪದವಿ ಪೂರ್ವ ಕಾಲೇಜುಗಳ ಎಲ್ಲಾ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಂದ ಪ್ರತಿ ವರ್ಷ ಸೇವಾದಲ ಶುಲ್ಕ ರೂ.10-00ಗಳನ್ನು ವಸೂಲಿ ಮಾಡಿ ಲೆಕ್ಕ ಶೀರ್ಷಿಕೆ 0202-03-800-1-01ರ ಅಡಿಯಲ್ಲಿ ಜಮಾ ಮಾಡುವಂತೆ ಹಾಗೂ ಈ ಸಂಬಂಧದಲ್ಲಿ ವಸೂಲಾದ ವಂತಿಗೆಯನ್ನು ಭಾರತ ಸೇವಾದಲ ತರಬೇತಿಗಾಗಿ ಮತ್ತು ಚಟುವಟಿಕೆಗಳಿಗಾಗಿ ವಿನಿಯೋಗಿಸತಕ್ಕದ್ದು ಎಂದು ಆದೇಶಿಸಿದೆ."

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

(ಎಸ್.ಎಂ.ನಂದಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ, (ಸಾಮಾನ್ಯ).

1) ಮಹಾಲೇಖಪಾಲರು, (ಎ ಮತ್ತು ಇ, ಲೆಕ್ಕಪರಿಶೋಧನೆ-1, ಲೆಕ್ಕಪರಿಶೋಧನೆ-2) ಕರ್ನಾಟಕ ಬೆಂಗಳೂರು.
2) ಪ್ರಧಾನ ಕಾರ್ಯದರ್ಶಿ, ಭಾರತ ಸೇವಾದಳ, ಕುಮಾರ ಕೃಪಾ ರಸ್ತೆ, ಬೆಂಗಳೂರು-560 001.
3) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
4) ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು
5) ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
6) ನಿರ್ದೇಶಕರು, (ಪ್ರಾಥಮಿಕ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
7) ಸರ್ಕಾರದ ಅಧೀನ ಕಾರ್ಯದರ್ಶಿ, (ವೆಚ್ಚ-7-8) ಆರ್ಥಿಕ ಇಲಾಖೆ, ವಿಧಾನಸೌಧ.
8) ಆಂತರಿಕ ಆರ್ಥಿಕ ಸಲಹೆಗಾರರು, ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ.
9) ಶಾಖಾ ರಕ್ಷ ಕಡತ
10) ಹೆಚ್ಚುವರಿ ಪ್ರತಿ.

ಕರ್ನಾಟಕ ಸರ್ಕಾರ

ಕ್ರಮಾಂಕ: ಪಪೂಶಿ/ರಾಸೇಯೋ/ಶುಲ್ಕ/2/2016-17

ನಿರ್ದೇಶಕರ ಕಛೇರಿ
ಪದವಿ ಪೂರ್ವ ಶಿಕ್ಷಣ ಇಲಾಖೆ
18ನೇ ಅಡ್ಡರಸ್ತೆ, ಮಲ್ಲೇಶ್ವರಂ
ಬೆಂಗಳೂರು
ದಿನಾಂಕ: 16-5-2016

## ಜ್ಞಾಪನ

ವಿಷಯ:- ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯದ ವಿದ್ಯಾರ್ಥಿಗಳಿಂದ ರಾಷ್ಟ್ರೀಯ ಸೇವಾ ಯೋಜನೆ ಚಟುವಟಿಕೆಗಳ ಅಭಿವೃದ್ಧಿಗಾಗಿ ಸಂಪನ್ಮೂಲ ಸಂಗ್ರಹಿಸುವ ಬಗ್ಗೆ.

ಉಲ್ಲೇಖ:- ಸರ್ಕಾರದ ಆದೇಶ ಸಂಖ್ಯೆ:ವಾಪ್ರಯು:36-3:ರಾಸೇಯೋ:03
ದಿನಾಂಕ: 08-01-2004

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಸರ್ಕಾರಿ ಆದೇಶದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಚಟುವಟಿಕೆಗಳ ಅಭಿವೃದ್ಧಿಗಾಗಿ ಪ್ರಥಮ ಹಾಗೂ ದ್ವಿತೀಯ ಪಿಯುಸಿ ಪ್ರತಿ ವಿದ್ಯಾರ್ಥಿಗಳಿಂದ ಪ್ರವೇಶ ಸಂದರ್ಭದಲ್ಲಿ ಪ್ರತಿ ವಿದ್ಯಾರ್ಥಿಗಳಿಂದ ಶುಲ್ಕವಾಗಿ ರೂ. 5/- ಪಡೆಯಲು ಮಾನ್ಯ ನಿರ್ದೇಶಕರು ಅನುಮೋದನೆ ನೀಡಿರುತ್ತಾರೆ. ದಾಖಲಾತಿ ಸಂದರ್ಭದಲ್ಲಿ ಸಂಗ್ರಹಿಸಿಲಾಗಿರುವ ರೂ. 5/- ರಲ್ಲಿ ರೂ. 2/-ನ್ನು ಕಾಲೇಜಿನಲ್ಲಿಯೇ ಉಳಿಸಿಕೊಂಡು ಈ ಕೆಳಕಂಡಂತೆ ಖರ್ಚು ಮಾಡಲು ಸೂಚಿಸಿದೆ. ಈ ಬಗ್ಗೆ ನಿಮ್ಮ ಕಾಲೇಜಿನ ಅಭಿವೃದ್ಧಿ ಸಮಿತಿ ಸಭೆಯ ಅನುಮೋದನೆ ಪಡೆದು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

ಕಾಲೇಜಿನಲ್ಲಿಯೇ ಉಳಿಸಿಕೊಂಡಿರುವ ರೂ. 2/-ರ ಒಟ್ಟು ಮೊತ್ತವನ್ನು ಎನ್.ಎಸ್.ಎಸ್ ಕಾರ್ಯಕ್ರಮಗಳಿಗೆ ಬಳಸಿಕೊಳ್ಳುವ ಬಗ್ಗೆ ಈ ನಿರ್ದೇಶನಾಲಯದಿಂದ ಸೂಕ್ತ ನಿರ್ದೇಶನ ನೀಡಲಾಗುವುದು. ಅದರಂತೆ, ಸದರಿ ಹಣವನ್ನು ಬಳಸಲು ಸೂಚಿಸಲಾಗಿದೆ.

ಮೇಲ್ಕಂಡ ರೂ. 5/- ರಲ್ಲಿ ಉಳಿಕೆ ರೂ. 3/- ನ್ನು ಶೈಕ್ಷಣಿಕ ವರ್ಷದ ದಾಖಲಾತಿ ಮುಗಿದ ನಂತರ ಎನ್.ಎಸ್.ಎಸ್ ಶುಲ್ಕದ ಒಟ್ಟು ಮೊತ್ತವನ್ನು ಕ್ರೋಢೀಕರಿಸಿ **"ನಿರ್ದೇಶಕರು" ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು** ಇವರ ಹೆಸರಿನಲ್ಲಿ ಬೇಡಿಕೆ ಹುಂಡಿ ಪಡೆದು ಈ ಕೆಳಕಂಡ ವಿಳಾಸಕ್ಕೆ ಶ್ರೀಮತಿ ಗಾಯಿತ್ರಿ ರೆಡ್ಡಿ, ಸಂಯೋಜನಾಧಿಕಾರಿಗಳು ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, 18ನೇ ಅಡ್ಡರಸ್ತೆ, ಬೆಂಗಳೂರು ಇವರ ವಿಳಾಸಕ್ಕೆ ಕಡ್ಡಾಯವಾಗಿ 31-8-2016 ರ ಒಳಗಾಗಿ ಕಳುಹಿಸಬೇಕು ಯಾವುದೇ ಕಾರಣಕ್ಕೂ ಎನ್.ಎಸ್.ಎಸ್ ಶುಲ್ಕವನ್ನು ಚಲನ್ ಮುಖಾಂತರ ಕಳುಹಿಸಬಾರದು.

**ನಿರ್ದೇಶಕರ ಪರವಾಗಿ**
**ಪದವಿ ಪೂರ್ವ ಶಿಕ್ಷಣ ಇಲಾಖೆ**

ರಾಜ್ಯದಲ್ಲಿ ಬರುವ ಎಲ್ಲಾ ಸರ್ಕಾರಿ/ ಅನುದಾನಿತ ಹಾಗೂ ಅನುದಾನ ರಹಿತ ಖಾಸಗಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ ಮುಂದಿನ ಸೂಕ್ತ ಕ್ರಮಕ್ಕಾಗಿ.